M. D.
22 MAY 2013
KPTCL

# ಕರ್ನಾಟಕ ಸರ್ಕಾರ

ಸಂಖ್ಯೆ:ಸಿಆಸುಇ 28 ಆರ್‌ಟಿಐ 2012

ಕರ್ನಾಟಕ ಸರ್ಕಾರದ ಸಚಿವಾಲಯ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ – ಜನಸ್ಪಂದನ)
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಮುಖ್ಯ ಗೋಪುರ,
ಬೆಂಗಳೂರು, ದಿನಾಂಕ : 29.04.2013

## ಸುತ್ತೋಲೆ

ವಿಷಯ:ಮಾಹಿತಿ ಹಕ್ಕು ಅಧಿನಿಯಮ, 2005ರ ಸೆಕ್ಷನ್ 4(1)(ಎ) ಮತ್ತು 4(1)(ಬಿ) ಅಡಿ ಸ್ವಯಂಪ್ರೇರಣೆಯಿಂದ ಮಾಹಿತಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ:1.ಸುತ್ತೋಲೆ ಸಂಖ್ಯೆ:ಸಿಆಸುಇ 28 ಆರ್‌ಟಿಐ 2012 ದಿನಾಂಕ 03.04.2012

2.ಸುತ್ತೋಲೆ ಸಂಖ್ಯೆ:ಸಿಆಸುಇ 140 ಆರ್‌ಟಿಐ 2012 ದಿನಾಂಕ 19.11.2012

3.ತಾಂತ್ರಿಕ ನಿರ್ದೇಶಕರು, ರಾಷ್ಟ್ರೀಯ ಮಾಹಿತಿ ಕೇಂದ್ರ, ಬೆಂಗಳೂರು ಇವರ ಪತ್ರ ಸಂಖ್ಯೆ:ಎಂ-11012/17/2013-ಕೆಎಆರ್‌ಎಸ್‌ಸಿ ದಿನಾಂಕ 28.02.2013

– – –

ಉಲ್ಲೇಖ (1)ರ ಸುತ್ತೋಲೆಯಲ್ಲಿ ಮಾಹಿತಿ ಹಕ್ಕು ಅಧಿನಿಯಮ, 2005ರ ಸೆಕ್ಷನ್ 4(1)(ಎ) ಮತ್ತು 4(1)(ಬಿ)ಗಳಡಿ ಮಾಹಿತಿಗಳನ್ನು ಆಯಾ ಇಲಾಖಾ ವೆಬ್‌ಸೈಟಿನಲ್ಲಿ ಪ್ರಕಟಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.

ಉಲ್ಲೇಖ (2)ರ ಸುತ್ತೋಲೆಯ ಮೊದಲನೇ ಕಂಡಿಕೆಯಲ್ಲಿ ಮೇಲ್ಕಂಡ ಮಾಹಿತಿಗಳನ್ನು ಸಿದ್ಧಪಡಿಸಿ ಆಯಾ ಇಲಾಖಾ ಸೂಚನಾ ಫಲಕದಲ್ಲಿ ಪ್ರಕಟಿಸುವುದರ ಜೊತೆಗೆ ರಾಜ್ಯ ಮಾಹಿತಿ ಕೇಂದ್ರದ ವೆಬ್ ಸೈಟಿನಲ್ಲಿ (NIC) ಹಾಕತಕ್ಕದ್ದು ಮತ್ತು ಮಾಹಿತಿಗಳನ್ನು ಕಾಲಕಾಲಕ್ಕೆ ಅಪ್‌ಡೇಟ್ ಮಾಡತಕ್ಕದ್ದೆಂದು ತಿಳಿಸಲಾಗಿದೆ.

ಉಲ್ಲೇಖ (3)ರ ಪತ್ರದಲ್ಲಿ ತಾಂತ್ರಿಕ ನಿರ್ದೇಶಕರು, ರಾಷ್ಟ್ರೀಯ ಮಾಹಿತಿ ಕೇಂದ್ರ, ಬೆಂಗಳೂರು ಇವರು, ಉಲ್ಲೇಖ (2)ರ ಸುತ್ತೋಲೆಯಲ್ಲಿ ಸದರಿ ಮಾಹಿತಿಗಳನ್ನು ಆಯಾ ಇಲಾಖಾ ಸೂಚನಾ ಫಲಕದಲ್ಲಿ ಪ್ರಕಟಿಸುವುದರ ಜೊತೆಗೆ ರಾಜ್ಯ ಮಾಹಿತಿ ಕೇಂದ್ರದ ವೆಬ್

ಸೈಟಿನಲ್ಲಿ (NIC) ಹಾಕತಕ್ಕದ್ದು ಎಂದು ತಿಳಿಸಿರುವ ಕಾರಣ ಇಲಾಖೆಗಳು ಸದರಿ ಮಾಹಿತಿಗಳನ್ನು ರಾಜ್ಯ ಮಾಹಿತಿ ಕೇಂದ್ರದ ವೆಬ್ ಸೈಟಿನಲ್ಲಿ ಅಳವಡಿಸಲು ರಾಜ್ಯ ಮಾಹಿತಿ ಕೇಂದ್ರಕ್ಕೆ ಕಳುಹಿಸುತ್ತಿರುವುದಾಗಿ ತಿಳಿಸುತ್ತಾ, ಮೇಲೆ ಉಲ್ಲೇಖ (1)ರ ಸುತ್ತೋಲೆಯನ್ವಯ ಇಲಾಖೆಗಳು ಮಾಹಿತಿಗಳನ್ನು ರಾಜ್ಯ ಮಾಹಿತಿ ಕೇಂದ್ರಕ್ಕೆ ಕಳುಹಿಸುವ ಬದಲು ತಮ್ಮ ವೆಬ್‌ಸೈಟಿನಲ್ಲಿಯೇ ಪ್ರಕಟಿಸಲು ತಿಳಿಸುವಂತೆ ಕೋರಿರುತ್ತಾರೆ.

ಆದ್ದರಿಂದ, ಇಲಾಖೆಗಳು ಉಲ್ಲೇಖ (2)ರ ಸುತ್ತೋಲೆಯ ಮೊದಲನೇ ಕಂಡಿಕೆಯಲ್ಲಿ ತಿಳಿಸಿರುವಂತೆ ಮಾಹಿತಿ ಹಕ್ಕು ಅಧಿನಿಯಮ, 2005ರ ಸೆಕ್ಷನ್ 4(1)(ಎ) ಮತ್ತು 4(1)(ಬಿ)ಗಳಡಿ **ಮಾಹಿತಿಗಳನ್ನು ರಾಜ್ಯ ಮಾಹಿತಿ ಕೇಂದ್ರದ ವೆಬ್ ಸೈಟಿನಲ್ಲಿ ಅಳವಡಿಸಲು ರಾಜ್ಯ ಮಾಹಿತಿ ಕೇಂದ್ರಕ್ಕೆ ಕಳುಹಿಸುವ ಬದಲಿಗೆ** ಉಲ್ಲೇಖ (1)ರ ಸುತ್ತೋಲೆಯಲ್ಲಿ (ಪ್ರತಿ ಲಗತ್ತಿಸಿದೆ) ತಿಳಿಸಿರುವಂತೆ ಸದರಿ ಮಾಹಿತಿಗಳನ್ನು ಸಿದ್ಧಪಡಿಸಿ ಆಯಾ ಇಲಾಖಾ ಸೂಚನಾ ಫಲಕದಲ್ಲಿ ಪ್ರಕಟಿಸುವುದರ ಜೊತೆಗೆ **ಆಯಾ ಇಲಾಖಾ ವೆಬ್‌ಸೈಟಿನಲ್ಲೇ** ಹಾಕತಕ್ಕದ್ದು ಮತ್ತು ಮಾಹಿತಿಗಳನ್ನು ಕಾಲಕಾಲಕ್ಕೆ ಅಪ್‌ಡೇಟ್ ಮಾಡತಕ್ಕದ್ದೆಂದು ಸೂಚಿಸಲಾಗಿದೆ.

(ಪರಮೇಶ್ ಪಾಂಡೆ)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ)

ಇವರಿಗೆ,

1.ಮುಖ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ, ಬೆಂಗಳೂರು.
2.ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು,
3.ಎಲ್ಲಾ ಇಲಾಖಾ ಮುಖ್ಯಸ್ಥರುಗಳು
4.ಎಲ್ಲಾ ನಿಗಮ/ಮಂಡಳಿಗಳ ವ್ಯವಸ್ಥಾಪಕ ನಿರ್ದೇಶಕರು / ಕಾರ್ಯದರ್ಶಿಗಳು
5.ಎಲ್ಲಾ ಜಿಲ್ಲಾಧಿಕಾರಿಗಳು/ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
6.ಎಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು
7.ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು
8.ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು
9.ತಾಂತ್ರಿಕ ನಿರ್ದೇಶಕರು, ರಾಷ್ಟ್ರೀಯ ಮಾಹಿತಿ ಕೇಂದ್ರ, ಬೆಂಗಳೂರು
10.ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಪ್ರತಿ:
ಕಡತ ಸಂಖ್ಯೆ:ಸಿಆಸುಇ 140 ಆರ್‌ಟಿಐ 2012ಕ್ಕೆ

# ಕರ್ನಾಟಕ ಸರ್ಕಾರ
## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
## (ಜನಸ್ಪಂದನ ಕೋಶ)

ಸಂಖ್ಯೆ : ಸಿಆಸುಇ:28:ಆರ್‌ಟಿಐ:2012

3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಗೋಪುರ,
ಬೆಂಗಳೂರು, ದಿನಾಂಕ : 03.04.2012.

## ಸುತ್ತೋಲೆ

ವಿಷಯ : ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕರಣ 4 ರಡಿ ಮಾಹಿತಿಯನ್ನು ಪ್ರಕಟಿಸುವ ಕುರಿತು
ಉಲ್ಲೇಖ : ಉಪ ಮಹಾನಿರ್ದೇಶಕರು, ಎನ್.ಐ.ಸಿ ಇವರ ಪತ್ರ ದಿನಾಂಕ : 13.02.2012.

****

ಮಾಹಿತಿ ಹಕ್ಕು ಅಧಿನಿಯಮದ ಸಂಪೂರ್ಣ ಅನುಷ್ಠಾನಕ್ಕಾಗಿ ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1) (ಎ)ರನ್ವಯ ಕಡತಗಳ ಕ್ರಮಬದ್ಧ ಸೂಚಿ ಪಟ್ಟಿ ಹಾಗೂ 4(1) (ಬಿ)ರನ್ವಯ ಸ್ವಯಂ ಘೋಷಿತ ಪ್ರಕರಣಗಳನ್ನು ಪ್ರಕಟಿಸುವುದು ಎಲ್ಲಾ ಸಾರ್ವಜನಿಕ ಪ್ರಾಧಿಕಾರಿಗಳಿಗೆ ಕಡ್ಡಾಯವಾಗಿದೆ. ಉಲ್ಲೇಖದಲ್ಲಿ ಕಾಣಿಸಿರುವ ದಿ:13.02.2012ರ ಪತ್ರದಲ್ಲಿ ಉಪ ಮಹಾ ನಿರ್ದೇಶಕರು, ಎನ್.ಐ.ಸಿರವರು ದಿ:06.04.2010ರಂದು ನಡೆದ ಕಾರ್ಯದರ್ಶಿಗಳ ಸಭೆಯಲ್ಲಿ ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1) (ಎ) ಮತ್ತು ಸೆಕ್ಷನ್ 4(1) (ಬಿ)ರಡಿ ಪ್ರಕಟಿಸಬೇಕಾದ ಮಾಹಿತಿಯನ್ನು ಇಲಾಖೆಗಳು ಆಯಾ ಇಲಾಖೆಯ Website ನಲ್ಲಿ ಪ್ರಕಟಿಸಬೇಕೆಂದು ತೀರ್ಮಾನವಾಗಿದೆಯಂತಲೂ, ಆದರೂ ಇಲಾಖೆಯವರು ಅವರ ಇಲಾಖೆಗೆ ಸಂಬಂಧಿಸಿದ ಮಾಹಿತಿಯನ್ನು ಡಿ.ಪಿ.ಎ.ಆರ್ - ಆರ್.ಟಿ.ಐ Website ನಲ್ಲಿ ಪ್ರಕಟಿಸಲು ಎನ್.ಐ.ಸಿ ಯವರನ್ನು ಕೋರುತ್ತಿದ್ದಾರೆಂದು ತಿಳಿಸುತ್ತಾ Website upload ಮಾಡಲು ಎನ್.ಐ.ಸಿ.ಗೆ ಕಳುಹಿಸುವ ಬದಲು ಆಯಾ ಇಲಾಖೆಯ ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಆಯಾ ಇಲಾಖೆಯವರೇ ಕ್ರಮ ತೆಗೆದುಕೊಳ್ಳಲು ಅವರುಗಳಿಗೆ ಸೂಚನೆ ನೀಡಲು ಕೋರಿರುತ್ತಾರೆ. (ಸದರಿ ಪತ್ರದ ಪ್ರತಿ ಲಗತ್ತಿಸಿದೆ)

ಮೇಲ್ಕಂಡ ಸಂದರ್ಭಗಳ ಹಿನ್ನೆಲೆಯಲ್ಲಿ ಎಲ್ಲಾ ಇಲಾಖೆಗಳೂ ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1) (ಎ) ಮತ್ತು 4(ಬಿ) ರಡಿ ಪ್ರಕಟಿಸಬೇಕಾದ ಮಾಹಿತಿಯನ್ನು DPAR - RTI Website ನಲ್ಲಿ ಪ್ರಕಟಿಸಲು ಎನ್.ಐ.ಸಿ.ಗೆ ಕಳುಹಿಸದೇ ಆಯಾ ಇಲಾಖೆಯವರೇ ಅವರ Website ನಲ್ಲಿ ಪ್ರಕಟಿಸಲು ಕ್ರಮ ಜರುಗಿಸಲು ಕೋರಲಾಗಿದೆ.

(ಶಾಲಿನಿ ರಜನೀಶ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಿಆಸುಇ (ಆಡಳಿತ ಸುಧಾರಣೆ - ಜನಸ್ಪಂದನ)

ಗೆ,

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
2. ಎಲ್ಲಾ ಇಲಾಖಾ ಮುಖ್ಯಸ್ಥರು
3. ಎಲ್ಲಾ ಜಿಲ್ಲಾಧಿಕಾರಿಗಳು
4. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು,
5. ರಾಷ್ಟ್ರೀಯ ಮಾಹಿತಿ ಕೇಂದ್ರ, ವಿ.ವಿ.ಗೋಪುರ, ಬೆಂಗಳೂರು.